ಪುಡಿಯನ್ನು ಬಾಯ್ಗೆಸೆದುಕೊಂಡು ಲೋಕಾಭಿರಾಮಕ್ಕಿಳಿದರು. ಒಳ ಮನೆಯಲ್ಲಿ ಸೊಸೆಗೆ ಅಡಿಗೆಯ ನಿರ್ದೇಶನ ಕೊಟ್ಟ ಆ ಮನೆಯ ಗೃಹಿಣಿ ಹಜಾರಕ್ಕೆ ಬಂದು ತಾವೂ ಕುಳಿತುಕೊಳ್ಳುತ್ತಾ, ಬಂದಿದ್ದ ಹೆಂಗಸರ ಮೈ ಮೇಲಿನ ನಗನಟ್ಟುಗಳನ್ನು ಉಟ್ಟಿದ್ದ ಕಾಂಚೀಪುರದ ಸೀರೆಗಳ ಜರ್ಬನ್ನು ಅಳತೆ ಹಾಕಿ ಇವರು ಶ್ರೀಮಂತರೆಂಬ ತೀರ್ಮಾನಕ್ಕೆ ಬಂದು ಬಿಟ್ಟರು. ಅಷ್ಟಲ್ಲದೆ ತಮ್ಮ ಬೀಗರು ಅವರ ಮಗಳನ್ನು ಇವರ ಮನೆಗೆ ಕೊಟ್ಟಿರುತ್ತಾರಾ? ಎಂಬ ಲೋಕಜ್ಞಾನದ ಮಾತೂ ಅವರ ಮನಸ್ಸನ್ನೊಮ್ಮೆ ಹಾದು ಹೋಯಿತು. ತಮ್ಮ ಪತಿ ವಿಶ್ವನಾಥ ಶೆಟ್ಟರೂ ಬಂದಿದ್ದವರೂ ಆಡುತ್ತಿದ್ದ ಮಾತಿನಿಂದ ಬಂದವರು ಹೆಣ್ಣು ನೋಡಲು ಬಂದಿರುವ ವಿಚಾರ ಇಷ್ಟರಲ್ಲಾಗಲೇ ಮನದಟ್ಟಾಗಿ ಕುತೂಹಲದಿಂದ 'ಯಾರ ಮನೆ ಹುಡುಗಿ?' ಎಂದು ಕೇಳಿದಾಗ

'ಅದೇ ಆ ಮೂರು ಸಾವಿರದ ಮನೆ' ಎಂದು ಹೇಳಿಬಿಟ್ಟ ಶೆಟ್ಟರು ತಟ್ಟನೆ ನಾಲಿಗೆ ಕಚ್ಚಿಕೊಂಡರು. ಬಂದಿದ್ದ ಶ್ರೀಮಂತರು, ಕೌತಕದಿಂದ 'ಅದೇನು? ಮೂರು ಸಾವಿರದ ಮನೆಯಾ? ಹಾಗಂದರೇನು? ಅವರ ಮನೆತನದ ಹೆಸರು ಸೋನಾರಿ ಅಂತ ಅಲ್ಲವಾ?' ಎಂದು ಕೇಳಿದರು.

'ಏನೂ ಇಲ್ಲ ಬಿಡಿ ಸುಮ್ಮನೆ ಬಾಯಿಗೆ ಬಂದು ಬಿಡ್ತು' ಎಂದು ವಿಶ್ವನಾಥ ಶೆಟ್ಟರು ಪೇಚಾಡಿಕೊಳ್ಳತೊಡಗಿದರು. 'ಸುಮ್ಮನೆ ಬಾಯಿಗೆ ಬರುತ್ತೆ? ಏನೋ ಇರಬೇಕು. ನೋಡಿ ಹೇಳಿಕೇಳಿ ನೀವು ನಮ್ಮ ಬಂಧುಗಳೇ ಆಗಿದ್ದೀರಿ. ನಾವು ಬಂದಿರೋದು ಈ ಊರಿನ ನೆಂಟಸ್ಥನ ಮಾಡಲು. ಹುಡುಗಿ ಬಗ್ಗೆ, ಹುಡುಗಿ ಮನೆ ಬಗ್ಗೆ ತಿಳಕೊಳ್ದೆ ನಾವು ಸಂಬಂಧ ಮಾಡಕ್ಕಾಗುತ್ತಾ? ನೀವು ಯಾವ ದಾಕ್ಷಿಣ್ಯವೂ ಮಾಡಿಕೊಳ್ಳದೆ ಇರೋ ವಿಷ್ಯಹೇಳಿ' ಎಂದು ಪಟ್ಟು ಹಿಡಿದರು. ಆ ಮನೆಯ ಹಿರಿಯ ಮುತ್ತೈದೆ 'ಅಯ್ಯೋ ಅಂಥದ್ದೇನಿಲ್ಲ, ಹುಡುಗಿ ಪಾಪ ಒಳ್ಳೇದೆ...' ಎಂದು ಮಾತನ್ನು ಅರ್ಧಕ್ಕೆ ತುಂಡರಿಸಿದಾಗ...



'ಒಳ್ಳೇತನ ಎಲ್ಲ ನಮ್ಮನೇಗೆ ಬಂದು ಸಂಸಾರ ಮಾಡಿದ್ಮೇಲೆ ಗೊತ್ತಾಗುತ್ತೆ ಬಿಡಿ. ಈಗ ಏನಿದ್ರೂ ಅಂದಚೆಂದ, ವಿದ್ಯೆಬುದ್ಧಿ, ಮನ್ತನ ನೋಡೋದು ಅಷ್ಟೇ... ಅದೆಲ್ಲ ಪರವಾಗಿಲ್ಲ. ಸರಿಯಾಗೇ ಇದೆ. ನಮ್ಮ ಮನ್ತನಕ್ಕೆ ಲಗತ್ತಾಗೇ ಇದೆ. ಆದ್ರೆ ಆ ಮೂರು ಸಾವಿರದ ಮನೆ ಅನ್ನೋದ್ಯಾಕೆ? ಆ ಕತೆ ಹೇಳಿ ನೀವು ಏನು ಹೇಳಿದ್ರೂ ತಪ್ಪಿಲ್ಲ. ಇಷ್ಟಕ್ಕೂ ನಿಮಗ್ಯಾಕೆ ಈ ಮಧ್ವೆ ತಪ್ಪಿಸ್‌ಬೇಕೂಂತ ಇರುತ್ತೆ? ನಿಮ್ಮನೇಲೇನು ವಯಸ್ಸಿನ ಹೆಣ್ಣಿಲ್ವಲ್ವ?' ಎಂದು ನಿಧಾನವಾಗಿ ನುಡಿಯುತ್ತಿರಲಾಗಿ...

'ಲಕ್ಷ್ಮಿ, ಇನ್ನು ಹೇಳದೆ ವಿಧಿ ಇಲ್ಲ, ಹೇಳೇ ಬಿಡ್ತೀನಿ ಮುಂದಿಂದು ದೈವೇಚ್ಛೆ' ಎಂದರು. ಜಯಲಕ್ಷ್ಮಮ್ಮನವರು ಮಾತ್ರ 'ದಯವಿಟ್ಟು ಈ ವಿಷ್ಯ ನಾವು ಹೇಳಿದ್ದು ಅಂತ ಹೇಳಬೇಡಿ' ಎಂದು ಅಂಗಲಾಚುವವರಂತೆ ಬೇಡಿದಾಗ ಅಲ್ಲೇ ಇದ್ದ ಅವರ ಸೊಸೆ–

'ಅಲ್ಲ ಅತ್ತೆಮ್ಮ, ಊರ್ಗೆಲ್ಲ ಗೊತ್ತಿರೋದು ನಾವು ಹೇಳಿದ್ರೆ ತಾನೆ ಏನು ತಪ್ಪಾಗುತ್ತೆ, ನೀವ್ಯಾಕೆ ಇಷ್ಟು ಹೆದ್ರಿಕೋತೀರ' ಎಂದು ಮಾತು ತೂರಿಸುತ್ತಾ ಹಜಾರದ ಕಂಬಕ್ಕೊರಗಿ ಮಾವನವರು ಹೇಳುವ ಕತೆಗೆ ಕಿವಿಯಾಗಿ ನಿಂತುಕೊಂಡಳು.

ಧ್ವನಿ ಸರಿಪಡಿಸಿಕೊಂಡು ವಿಶ್ವನಾಥ ಶೆಟ್ಟರು 'ಇದೆಲ್ಲ ನಡೆದು ಹದಿನೈದು ವರ್ಷವೇ ಆಗಿದೆ. ನೋಡಿ ಸ್ವಾಮಿ ನಮ್ಮೂರು ಚಿಕ್ಕ ಊರು. ಆಗ ಇಲ್ಲಿ ನಮ್ಮವರ ಒಕ್ಕಲಿದಿದ್ದೆ ಮೂವತ್ತು. ಈಗ ಅಷ್ಟಿಲ್ಲ ಬಿಡಿ, ಕಡಿಮೆಯಾಗಿಬಿಟ್ಟಿದೆ. ಈ ಊರಿನಲ್ಲಿ ಲಾಗಾಯ್ತಿನಿಂದ ನಮ್ಮದೊಂದು ಒಕ್ಕೂಟ ಇದೆ. ವಾಸವೀ ಕೇಂದ್ರ ಅಂತ ಹೆಸರು. ಇಲ್ಲಿ ನಾವಿರೋದೇ ಮೂವತ್ತು ಮನೆ ಅನ್ನೋ ಕಾರಣಕ್ಕೆ